# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ942/2015

## ಚಾಸಾ-1/ಪ್ರಾಸಾ-4

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ28.02.2026**

ಹೆಸರು : ಸಿದ್ದಪ್ಪ ತಂದೆ ಬಸಪ್ಪ ಬಿ

ವಯಸ್ಸು : **64** ವರ್ಷ

ಉದ್ಯೋಗ : ನಿವೃತ್ತ ನೌಕರರು

ವಿಳಾಸ : ದಾವಣಗೆರೆ

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಆರೋಪಿ 1 ರಿಂದ 6 ನನಗೆ ಗೋತ್ತು . ನಾನು ಜಗಳೂರಿನ ಪ್ರಭಾರೆ ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಜಗಳೂರಿನಲ್ಲಿ ಅಕ್ಟೋಬರ್ 2012 ರಿಂದ ನವೆಂಬರ್ 2012 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ . ನಾನು ಜಗಳೂರಿನ ಕಾರ್ಯ ನಿರ್ವಾಹಕ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಜಿಲ್ಲಾ ಪಂಚಾಯತಿ ದಾವಣಗೆರೆಯಿಂದ ಪತ್ರ ಬಂದಿದ್ದು , ಸದರಿ ಪತ್ರವನ್ನು ಪರಿಶೀಲಿಸಿದಾಗ ದೊಣ್ಣೆ ಗ್ರಾಮ ಪಂಚಾಯತಿಯಲ್ಲಿ ಮನರೇಗಾ ( MNREGA ) ಕಾರ್ಯಕ್ರಮಗಳಲ್ಲಿ ಕಾಮಗಾರಿ ಮತ್ತು ಹಣದ ದುರುಪಯೋಗ ಆದ ಬಂದ ಪತ್ರ ಬಂದಿರುತ್ತದೆ . ಈಗಾಗಲೇ ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಸ್ಥಳ ಪರೀಶಿಲನೆ ಮಾಡಿಕೊಂಡು ವರದಿ ತಗೆದುಕೊಂಡು ಹೋಗಿರುತ್ತಾರೆ . ನನಗೆ ಸದರಿ ಪಂಚಾಯತಿಯ ಅಧ್ಯಕ್ಷರಾಗಿದ್ದು ಗುರುಮೂರ್ತಿ , ಪಿಡಿಓ ಮಲ್ಲಿಕಾರ್ಜುನಪ್ಪ ಮತ್ತು ಇಂಜಿನಿಯರ್ ಹನುಮಂತಪ್ಪ ಅವರುಗಳ ಮೇಲೆ ಕ್ರಮ ತಗೆದುಕೊಳ್ಳಲು ಆದೇಶ ಇರುತ್ತದೆ . ಉಳಿದ ರುದ್ರಪ್ಪ ರಾಜಣ್ಣ , ಫಾರೆಸ್ಟ್ ಅಫೀಸರ್ ಮತ್ತು ಫಾರೆಸ್ಟ್ ಗಾರ್ಡ್ ಅವರ ವಿರುದ್ದ ನಾನು ಜಗಳೂರು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ . ಸದರಿಯವರು ಈ ಪ್ರಕರಣದ ಆರೋಪಿಗಳು ಇರುತ್ತಾರೆ . ನನಗೆ

ಆರೋಪಿಗಳ ವಿರುದ್ಧ 5 ಕಾಮಗಾರಿಗಳ ವಿರುದ್ಧ ದೂರನ್ನು ನೀಡಲು ಸೂಚಿಸಿರುತ್ತಾರೆ . ಅದರಂತೆ ನಾನು ದಿಃ 20.10.2012 ರಂದು ಜಗಳೂರು ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ . ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ 3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 3 (ಎ) ಎಂದು ಗುರುತಿಸಲಾಯಿತು. ನಾನು ಒಟ್ಟು 7 ಜನರ ವಿರುದ್ಧ ನಿಪಿ 3 ದೂರನ್ನು ದಾಖಲಿಸಿರುತ್ತೇನೆ . ನಂತರ ದಿಃ 26.10.2012 ರಂದು ಚಾಸಾ-21 ರವರೊಡನೆ ಸ್ಥಳ ಪಂಚನಾಮೆ ಮಾಡಲು ದೊಣ್ಣೆ ಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಣ್ಣೆಹಳ್ಳಿ ಗ್ರಾಮದ ಸರ್ವೆ ನಂಬರ್ 147 ಚಾಸಾ-9 ರವರ ಜಮೀನಿನಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ನಿಪಿ 1 ರಂತೆ ಪಂಚನಾಮೆ ಜರುಗಿಸಿರುತ್ತಾರೆ . ನಿಪಿ 1 ಪಂಚನಾಮೆ ಕಾಲಕ್ಕೆ ಪೋಲೀಸರೊಂದಿಗೆ ಇಬ್ಬರು ಪಂಚರು ಬಂದಿರುತ್ತಾರೆ . ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ 1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1 (ಸಿ) ಎಂದು ಗುರುತಿಸಲಾಯಿತು. ಪೋಲಿಸರು ಪಂಚನಾಮೆ ಜರುಗಿಸಿದ ನಂತರ ಲಕ್ಷಮ್ಮ ಅವರಿಗೆ ಸೇರಿದ ಸರ್ವೆ ನಂಬರ್ 143 ರ ಜಮೀನಿಗೆ ಹೋಗಿರುತ್ತಾರೆ . ಸದರಿ ಪಂಚನಾಮೆ ಕಾಲಕ್ಕೆ ಪೋಲಿಸರು 4 ಪೋಟೋ ತಗೆದಿರುತ್ತಾರೆ . ಸಾಕ್ಷಿಗೆ ಕಡತದಲ್ಲಿರುವ 4 ಪೋಟೋಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತಾನು ಇದ್ದ ಬಗ್ಗೆ ಒಪ್ಪಿಕೊಂಡಿದ್ದು, ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಆರೋಪಿತರ ಬಗ್ಗೆ ಮಾಹಿತಿಯನ್ನು ಕೇಳಿರುತ್ತಾರೆ . ಅದರಂತೆ ನಾನು ಅವರಿಗೆ ಆರೋಪಿಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ . ಈ ಬಗ್ಗೆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಗೆ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯು ಪೋಲಿಸರಿಗೆ ನೀಡಿದ ದಾಖಲೆ ಆಗಿದ್ದು ಅದನ್ನು ನಿಪಿ 8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 8 (ಎ) ಎಂದು ಗುರುತಿಸಲಾಯಿತು.

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಅವಕಾಶ ಕೋರಿದ್ದು , ಮುಂದುವರೆದ ಮುಖ್ಯ ವಿಚಾರಣೆಗೆ ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ**

**Sd/-**

**ಪ್ರ.ದ.ನ್ಯಾ.ದಂ., ಜಗಳೂರು**